
# ಪ್ರಹಸನ ಪ್ರಸಂಗ

ದಿನನಿತ್ಯದ ನಮ್ಮ ಯಾಂತ್ರಿಕ ಚಟುವಟಿಕೆಗಳಲ್ಲಿ ನಮ್ಮನ್ನು ನಾವೇ ಮರೆತುಬಿಡುತ್ತೇವೆ. ಈ ಆತ್ಮವಿಸ್ಮೃತಿಯಿಂದ ವಿವೇಚನಾ ಶಕ್ತಿಯನ್ನು ಕಳೆದುಕೊಳ್ಳುತ್ತೇವೆ. ಇದರಿಂದ ನಾವು ಗಂಡಾಂತರಕ್ಕೆ ಒಳಗಾಗುತ್ತೇವೆ. ನಮಗೆ ಪ್ರಜ್ಞೆ ಬರುವ ಹೊತ್ತಿಗೆ ಕಾಲ ಮೀರಿ ಹೋಗಿರುತ್ತದೆ.

ಒಬ್ಬರು ಸರ್ದಾರ್ಜಿ ಹದಿಮೂರನೆ ಮಹಡಿಯಲ್ಲಿದ್ದ ತಮ್ಮ ಆಫೀಸಿನಲ್ಲಿ ಕುಳಿತಿದ್ದರು. ಒಬ್ಬ ವ್ಯಕ್ತಿ ಓಡುತ್ತ ಬಂದು "ಸಂತ ಸಿಂಗ್, ಸಂತ ಸಿಂಗ್, ನಿಮ್ಮ ಮಗಳು ಪ್ರೀತು ಈಗ ತಾನೆ ಅಪಘಾತಕ್ಕೀಡಾಗಿ ಸತ್ತುಹೋದಳು." ಇದನ್ನು ಕೇಳಿ ಸರ್ದಾರ್ಜಿ ದಿಗ್ಭ್ರಾಂತರಾದರು, ಏನು ಮಾಡಬೇಕೆಂದೇ ತೋಚಲಿಲ್ಲ. ಆತುರದಲ್ಲಿ ಕಿಟಕಿಯಿಂದ ಕೆಳಗೆ ಹಾರಿದರು.

ಸರ್ದಾರ್ಜಿ ಕೆಳಗೆ ರಭಸದಿಂದ ಬೀಳುತ್ತಿದ್ದಾರೆ. ಅವರು ಸುಮಾರು ಹತ್ತನೆ ಮಹಡಿಯ ಮಟ್ಟಕ್ಕೆ ಬಂದಾಗ ಅವರಿಗೆ ನೆನಪಾಯಿತು ತಮಗೆ ಪ್ರೀತು ಎಂಬ ಮಗಳೇ ಇಲ್ಲ ಎಂದು. ಸುಮಾರು ಐದನೆಯ ಮಹಡಿಯ ಹತ್ತಿರ ಬಂದಾಗ ಅವರಿಗೆ ಹೊಳೆಯಿತು, ತಮಗೆ ಮದುವೆಯೇ ಆಗಿಲ್ಲ ಎಂದು. ಅವರು ಇನ್ನೇನು ಭೂಮಿಗೆ ಅಪ್ಪಳಿಸಬೇಕು ಎನ್ನುವಾಗ ತಮ್ಮ ಹೆಸರು ಸಂತ ಸಿಂಗ್ ಅಲ್ಲ ಎನ್ನುವುದು ಗೊತ್ತಾಯಿತು.

* * * * * *




ನಾವು ಭಗವಂತನನ್ನು ನಂಬುವುದು ಸ್ವಪ್ರಯೋಜನಕ್ಕಾಗಿ, ಭಗವಂತನಿಗಾಗಿಯೇ ಅವನನ್ನು ನಂಬುವವರು ಬಹಳ ಅಪರೂಪ. ಆದ್ದರಿಂದ ಭಗವಂತನೇ ನಮ್ಮ ಮುಂದೆ ಬಂದು ನಿಂತರೂ ಅವನಲ್ಲಿ ನಮಗೆ ನಂಬಿಕೆ ಹುಟ್ಟುವುದಿಲ್ಲ.

ಒಬ್ಬ ನಾಸ್ತಿಕನಿದ್ದ. ಅವನು ಒಂದು ದಿನ ಕಾಡಿನಲ್ಲಿ ಓಡಾಡುತ್ತ ಅದರ ಸೊಬಗನ್ನು ಸವಿಯುತ್ತಿದ್ದ. ಇದ್ದಕ್ಕಿದ್ದಂತೆಯೆ ಹಿಂದೆ ಏನೋ ಸದ್ದಾಯಿತು. ತಿರುಗಿ ನೋಡಿದಾಗ ಒಂದು ದೊಡ್ಡ ಕರಡಿ ಅವನೆಡೆಗೆ ಧಾವಿಸುತ್ತಿತ್ತು. ಕೂಡಲೇ ನಾಸ್ತಿಕ ಕಾಲಿಗೆ ಬುದ್ಧಿ ಹೇಳಿದ. ಸ್ವಲ್ಪದೂರ ಓಡಿ ಹಿಂತಿರುಗಿ ನೋಡುತ್ತಾನೆ, ಕರಡಿ ಅವನ ಹತ್ತಿರವೇ ಓಡಿಬರುತ್ತಿದೆ. ಅವನು ತನ್ನ ವೇಗದ ಮಿತಿಯನ್ನು ಹೆಚ್ಚಿಸಿದ. ಕರಡಿಯೂ ಹಾಗೆಯೇ ಮಾಡಿತು. ಅವನು ತನ್ನ ಎಲ್ಲ ಶಕ್ತಿಯನ್ನೂ ಉಪಯೋಗಿಸಿ ಓಡಿದ, ತನ್ನ ಶಕ್ತಿಯನ್ನೂ ಮೀರಿ ಓಡಿದ. ಆದರೆ ಪ್ರಯೋಜನವಾಗಲಿಲ್ಲ.

ಕರಡಿ ಅವನ ಮೇಲೆ ಎರಗಿತು. ಅವನು ಕೆಳಕ್ಕುರುಳಿದ. ಈಗ ತನ್ನ ಪ್ರಾಣ ಉಳಿಸಿಕೊಳ್ಳುವ ಕೊನೆಯ ಪ್ರಯತ್ನವಾಗಿ ದೇವರನ್ನು ಪ್ರಾರ್ಥಿಸತೊಡಗಿದ. ದೇವರು ಅವನ ಭಕ್ತಿಗೆ ಮೆಚ್ಚಿರಬೇಕು!

ಎಲ್ಲ ನಿಶ್ಶಬ್ದವಾಯಿತು. ಆಕಾಶದ ಕಡೆಯಿಂದ ಒಂದು ಬೆಳಕು ಧರೆಗಿಳಿಯಿತು. ಒಂದು ದಿವ್ಯವಾಣಿ ಕೇಳಿಸಿತು: "ಎಲೈ ಪಾಪಿ, ನೀನು ದೇವರೇ ಇಲ್ಲ ಎಂದು ಯಾವಾಗಲೂ ಹೇಳುತ್ತಿದ್ದೆ. ಈಗ ಸಂಕಟದಲ್ಲಿ ನನ್ನನ್ನು ಕರೆಯುತ್ತಿರುವೆ. ಏನು, ನಿನ್ನನ್ನು ನಾನು ಆಸ್ತಿಕ ಎಂದು ಪರಿಗಣಿಸಬಹುದೇ?"

ನಾಸ್ತಿಕ ಹೇಳಿದ : "ಈಗ ಇದ್ದಕ್ಕಿದ್ದಂತೆಯೆ ಆಸ್ತಿಕನಾಗಿ ಬಿಡುವುದು ಆಷಾಡಭೂತಿತನವಾಗುತ್ತದೆ. ನೀನು ಈ ಕರಡಿಯನ್ನು ಆಸ್ತಿಕನನ್ನಾಗಿ ಮಾಡುವುದು ಒಳ್ಳೆಯದು." (ಕರಡಿ ಆಸ್ತಿಕವಾದರೆ ತನ್ನ ಪ್ರಾಣ ಉಳಿಯುತ್ತದೆ ಎಂದು ಅವನು ಭಾವಿಸಿದ). ದೇವರು "ಆಗಲಿ" ಎಂದನು.

ಕೂಡಲೇ ಧ್ವನಿ ನಿಂತಿತು, ಬೆಳಕು ಮಾಯವಾಯಿತು. ಕರಡಿಯು ತನ್ನ ಕೈಗಳನ್ನು ಜೋಡಿಸಿ, "ಭಗವಂತನೆ, ಇಂದು ನೀನು ಇಂತಹ ಉತ್ತಮ ಆಹಾರವನ್ನು ನೀಡಿದುದಕ್ಕಾಗಿ ನಿನಗೆ ತುಂಬ ಧನ್ಯವಾದಗಳು," ಎಂದು ಪ್ರಾರ್ಥಿಸಿ ನಾಸ್ತಿಕನನ್ನು ಕಬಳಿಸಿತು.

* * * * * *

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಅಕ್ಟೋಬರ್ 2001**

| | | |
|---|---|---|
| **23** | ಮಂಗಳವಾರ | ದುರ್ಗಾಪೂಜಾ ಮಹಾಸಪ್ತಮಿ |
| **24** | ಬುಧವಾರ | ದುರ್ಗಾಪೂಜಾ ಮಹಾಷ್ಟಮಿ |
| **25** | ಗುರುವಾರ | ದುರ್ಗಾಪೂಜಾ ಮಹಾನವಮಿ |
| **26** | ಶುಕ್ರವಾರ | ವಿಜಯದಶಮಿ |

*ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ*
*ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ*
*ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.*

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ